ಧಾರವಾಡದಲ್ಲಿ ಕೇಂದ್ರ ಪ್ರವಾಸೋದ್ಯಮ ಯಾತ್ರಿ ನಿವಾಸ ಸ್ಥಾಪಿಸುವುದು

4939 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಧಾರವಾಡದಲ್ಲಿ ಕೇಂದ್ರ ಪ್ರವಾಸೋದ್ಯಮ ಇಲಾಖೆ ಯಾವ ವರ್ಷದಿಂದ ಯಾತ್ರಿ ನಿವಾಸ ಕಟ್ಟಡದ ಕೆಲಸವನ್ನು ಪ್ರಾರಂಭಿಸಿರುತ್ತದೆ? ಈ ಕೆಲಸವನ್ನು ಪೂರ್ಣ ಮಾಡಲು ನಿಗಧಿತ ಅವಧಿ ಎಷ್ಟು?*

ಆ) *ಈ ಕಟ್ಟಡಕ್ಕೆ ಖರ್ಚು ಮಾಡಿದ ವೆಚ್ಚವೆಷ್ಟು? ವಿವರ ನೀಡುವುದು.*

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಧಾರವಾಡದಲ್ಲಿ ಕೇಂದ್ರ ಸರ್ಕಾರದ ಧನ ಸಹಾಯದಿಂದ ಯಾತ್ರಿ ನಿವಾಸದ ನಿರ್ಮಾಣ 1997ರಲ್ಲಿ ಪ್ರಾರಂಭಿಸಿ ಜೂನ್ 2000ರಲ್ಲಿ ಪೂರ್ಣಗೊಳಿಸಿದೆ.

ಆ) ರೂ. 89.22 ಲಕ್ಷ
ರೂ. 50.20 ಲಕ್ಷ ಕೇಂದ್ರದ ಪಾಲು
ರೂ. 39.02 ಲಕ್ಷ ರಾಜ್ಯದ ಪಾಲು

ಧಾರವಾಡ ನಗರದಲ್ಲಿ ಬೃಹತ್ ಕ್ರೀಡಾಂಗಣದ ನಿರ್ಮಾಣ

4940 - ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕರ್ನಾಟಕದ ಯುವಕರ ಸಂಪನ್ಮೂಲ ಇರುವ ಶೈಕ್ಷಣಿಕ ಕೇಂದ್ರವಾದ ಧಾರವಾಡ ನಗರದಲ್ಲಿ ಎರಡು ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಬೆಂಗಳೂರು, ಮೈಸೂರು ಮಹಾನಗರದಲ್ಲಿರುವ ಮಾದರಿಯಂತೆ ಧಾರವಾಡ ನಗರದಲ್ಲಿ ಬೃಹತ್ ಕ್ರೀಡಾಂಗಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಸದ್ಯ ಇರುವ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯ ಇಲ್ಲದ ಕಾರಣ ಏಶಿಯಡ್ ಕ್ರೀಡೆಗಳು ನಡೆಯದಿದ್ದುದು, ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಸುಸಜ್ಜಿತ ಕ್ರೀಡಾಂಗಣವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಉ) *ಮಹಾನಗರದಲ್ಲಿ ರಾಷ್ಟ್ರ ಮಟ್ಟದ ಈಜು ಸ್ಪರ್ಧೆಗಳನ್ನು ನಡೆಸಲು ನೀರಿನ ಸೌಲಭ್ಯವಿರುವ ಕೇರಿಯ ದಂಡೆಯಲ್ಲಿ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?*